1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

ಸಿ.ಸಿ. ನಂ. 926-2011

ಸಿಡಬ್ಲೂ -8 ಪಿಡಬ್ಲೂ-9

| | |
|---|---|
| ಸಾಕ್ಷಿದಾರನ ಹೆಸರು | : ಸಂತೋಷ ವೈ ಎಸ್ |
| ತಂದೆಯ ಹೆಸರು | : ಸೀತಾರಾಮ್ ರಾವ್ |
| ವಯಸ್ಸು | : 49ವರ್ಷ |
| ಕೆಲಸ | : ಖಾಸಗಿ ನೌಕರಿ |
| ವಾಸ | : ಜೆ ಪಿ ನಗರ, ಬೆಂಗಳೂರು |

ಸಾಕ್ಷಿಯನ್ನು ದಿನಾಂಕಃ 15-07-2024ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ

ನಾನು ಈ ಹಿಂದೆ ಜೆ ಪಿ ನಗರ ಭಾರ್ಗವ ಟೆಲಿಕಾಮ್ಸ್ ಎಂಬ ಹೆಸರಿನಲ್ಲಿ ಸೀಮ್ ಕಾರ್ಡ ಮಾರಾಟ ಮಾಡುವ ಅಂಗಡಿಯನ್ನು ಇಟ್ಟುಕೊಂಡಿದ್ದೆ. ದಿ. 16-01-2009 ರಂದು ಚಾಸಾ 6 ರವರು ನನ್ನ ಅಂಗಡಿಗೆ ಬಂದು ಒಂದು ಸೀಮ್ ಕಾರ್ಡ ನ್ನು ಖರೀದಿಸಿದ್ದರು. ಅವರಿಂದ ನಾನು ಒಂದು ಪಾಸ್‌ಪೋರ್ಟ ಸೈಜ್ ಪೋಟೋ ಮತ್ತು ಚಾಲನಾ ಪರವಾನಿಗೆ ಪತ್ರವನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ನಿಪಿ. 6 ಮತ್ತು 7 ನ್ನು ನೋಡಿ ಗುರುತಿಸಿರುತ್ತಾರೆ. ನಿಪಿ. 6 ನ್ನು ಚಾಸಾ 6 ರವರೆ ಭರ್ತಿ ಮಾಡಿ ನೀಡಿದ್ದರು. ನಂತರ ನಾನು ವಿಶ್ವ ಟೆಲಿಕಮ್ಯುನಿಕೇಷನ್ ರವರಿಗೆ ನಿಪಿ. 6 ನ್ನು ಕಳುಹಿಸಿರುತ್ತೇನೆ. ಒಂದು ದಿನದ ನಂತರ ಸೀಮ್ ಕಾರ್ಡ ಚಾಲ್ತಿಗೆ ಬಂದಿರುತ್ತದೆ.

ಪಾಟೀ ಸವಾಲು 3 ಮತ್ತು 5 ಆರೋಪಿತರ ಪರ ಶ್ರೀ ಎನ್ ಎನ್ ವಕೀಲರು ಪಾಟೀ ಸವಾಲು ಇಲ್ಲಾ ಎಂದು ತಿಳಿಸಿರುತ್ತಾರೆ.

ಪಾಟೀ ಸವಾಲು 6 ಆರೋಪಿ ಪರ ಶ್ರೀ ಕೆಕೆ ವಕೀಲರು ಪಾಟೀ ಸವಾಲು ಇಲ್ಲಾ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ಮ. ದಂ. ನ್ಯಾ